# ಕಲಿಕೆಯ ಮಟ್ಟ ಏಕೆ ಕುಸಿಯುತ್ತಿದೆ?

ಪ್ರಾಥಮಿಕ ಶಾಲೆಗಳಲ್ಲಿ ಕಲಿಕೆಯ ಮಟ್ಟ ತೀವ್ರ ಕುಸಿತಕ್ಕೆ ಕಾರಣಗಳೇನು? ಶಿಕ್ಷಕರು ಸರಿಯಾಗಿ ಓದಿಸುತ್ತಿಲ್ಲವೆ? ಅಥವಾ ಮಕ್ಕಳ ಓದುವ, ಗ್ರಹಿಸುವ ಮಟ್ಟವೇ ಕಡಿಮೆ ಆಗುತ್ತಿದೆಯೆ? ಅಥವಾ ಶಾಲೆಗಳಲ್ಲಿ ಕಲಿಕೆಯ ಕ್ರಮವೇ ಸರಿಯಿಲ್ಲವೆ?

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ಶೇಕಡಾ 30ರಷ್ಟು ವಿದ್ಯಾರ್ಥಿಗಳಿಗೆ ಎರಡನೇ ತರಗತಿಯ ಪುಸ್ತಕ ಕೂಡಾ ಓದಲು ಬರುತ್ತಿಲ್ಲ ಎಂದು ಸಮೀಕ್ಷೆಯೊಂದು ಬಹಿರಂಗಪಡಿಸಿದೆ! 'ಪ್ರಥಮ್ ಎಜುಕೇಶನ್ ಫೌಂಡೇಷನ್' 2016ರಲ್ಲಿ ದೇಶದಾದ್ಯಂತ ನಡೆಸಿದ ಸಮೀಕ್ಷೆಯಲ್ಲಿ ಈ ಅಂಶ ಬೆಳಕಿಗೆ ಬಂದಿದೆ. ರಾಷ್ಟ್ರೀಯ ಮಟ್ಟದಲ್ಲಿ ಕಲಿಕೆಯ ಪ್ರಮಾಣ ಇನ್ನೂ ಚಿಂತಾಜನಕವಾಗಿದ್ದು, ಶೇಕಡಾ 41 ಮಂದಿ ಐದನೇ ತರಗತಿಯ ವಿದ್ಯಾರ್ಥಿಗಳಿಗೆ ಎರಡನೇ ತರಗತಿಯ ಪಠ್ಯಗಳನ್ನು ಓದಲು ಬರುತ್ತಿಲ್ಲ! ದೇಶದ 589 ಜಿಲ್ಲೆಗಳ 17,473 ಗ್ರಾಮಗಳಲ್ಲಿ ಮೂರೂವರೆ ಲಕ್ಷ ಮನೆಗಳಿಗೆ ಭೇಟಿ ನೀಡಿ 5.62 ಲಕ್ಷ ಮಕ್ಕಳ ಸಮೀಕ್ಷೆಯನ್ನು ನಡೆಸಿದಾಗ ಈ ವಿಷಯ ಗೊತ್ತಾಗಿದೆ. ಬೇರೆ ವಿಷಯಗಳು ಮಾತ್ರವಲ್ಲ, ಅಂಕಗಣಿತದಲ್ಲಿಯೂ ಮಕ್ಕಳ ಕಲಿಕೆಯ ಮಟ್ಟ ಬಹಳ ಕಡಿಮೆ ಇದೆ ಎನ್ನುವುದು ಸಮೀಕ್ಷೆ ಬಹಿರಂಗಪಡಿಸಿದ ಅಂಶ. ಎಂಟನೇ ತರಗತಿಯ ಶೇಕಡಾ 25.4ರಷ್ಟು ಮಕ್ಕಳು ಮಾತ್ರವೇ 10ರಿಂದ 99ರವರೆಗಿನ ಅಂಕಿಗಳನ್ನು ಗುರುತಿಸಲು ಶಕ್ತರು ಎನ್ನುವುದು ನಿಜಕ್ಕೂ ಕಳವಳಕಾರಿ ಸಂಗತಿ. 2014ರಲ್ಲಿ ಇದೇ ರೀತಿಯ ಸಮೀಕ್ಷೆಯನ್ನು ಮಾಡಿದಾಗ, ಈ ಅಂಕಿಗಳನ್ನು ಗುರುತಿಸಬಲ್ಲ ಎಂಟನೇ ತರಗತಿಯ ವಿದ್ಯಾರ್ಥಿಗಳ ಪ್ರಮಾಣ ಶೇಕಡಾ 31,2ರಷ್ಟಿತ್ತು. ಅಂದರೆ ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಇನ್ನಷ್ಟು ಕುಸಿದಿದೆ ಎನ್ನುವುದು ಸ್ಪಷ್ಟ.

ಸರ್ಕಾರಿ ಶಾಲೆಗಳಿಗೆ ಹೋಲಿಸಿದರೆ ಖಾಸಗಿ ಶಾಲೆಗಳು ಎಷ್ಟೋ ವಾಸಿ ಎನ್ನಬಹುದಾದರೂ ಅಲ್ಲಿಯೂ ಕಲಿಕೆಯ ಗುಣಮಟ್ಟ ಕುಸಿತ ಕಂಡುಬಂದಿದೆ. ಖಾಸಗಿ ಶಾಲೆಗಳಲ್ಲಿ ಮೂರನೇ ತರಗತಿಯಲ್ಲಿ ಸರಾಸರಿ ಶೇಕಡಾ 38.7 ರಷ್ಟು ವಿದ್ಯಾರ್ಥಿಗಳು ಕೂಡಿಸುವುದನ್ನು ಸರಿಯಾಗಿ ಮಾಡಬಲ್ಲರು. ಈ ಪ್ರಮಾಣ ಸರ್ಕಾರಿ ಶಾಲೆಗಳಲ್ಲಿ ಶೇಕಡಾ 2.5ರಷ್ಟು ಮಾತ್ರ ಇದೆ. ಆದರೆ ಎಲ್ಲಕ್ಕಿಂತ ಹೆಚ್ಚು ಚಿಂತೆ ಹುಟ್ಟಿಸಿರುವುದು– ಕನ್ನಡ ಓದಲು ಬಾರದಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು. ಈ ವಿಷಯದಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲೆ ಎರಡೂ ಕಡೆ ಪರಿಸ್ಥಿತಿ ಒಂದೇ ತೆರನಾಗಿದೆ. ಹಾಗೆ ನೋಡಿದರೆ ಕಲಿಕೆಯ ಪ್ರಕ್ರಿಯೆ ಶುರುವಾಗುವ ಒಂದನೇ ತರಗತಿಯಲ್ಲೇ ಈ ಹಿನ್ನಡೆ ಕಾಣಿಸಿಕೊಂಡಿದೆ. ಒಂದನೇ ತರಗತಿಯ ಶೇಕಡಾ 46.2ರಷ್ಟು ಮಕ್ಕಳಿಗೆ ಒಂದೇ ಒಂದು ಅಕ್ಷರವೂ ಓದಲು ಬರುವುದಿಲ್ಲ; ಶೇಕಡಾ 36ರಷ್ಟು ಮಕ್ಕಳಿಗೆ ಒಂದೇ ಒಂದು ಅಂಕಿಯನ್ನು ಗುರುತಿಸಲೂ ಬರುವುದಿಲ್ಲ.

ಈ ಸಮಸ್ಯೆಗೆ ಕಾರಣಗಳೇನು? ಶಿಕ್ಷಕರು ಸರಿಯಾಗಿ ಓದಿಸುತ್ತಿಲ್ಲವೆ? ಅಥವಾ ಮಕ್ಕಳ ಓದುವ, ಗ್ರಹಿಸುವ ಮಟ್ಟವೇ ಕಡಿಮೆ ಆಗುತ್ತಿದೆಯೆ? ಅಥವಾ ಶಾಲೆಗಳಲ್ಲಿ ಕಲಿಕೆಯ ಕ್ರಮವೇ ಸರಿಯಿಲ್ಲವೆ? ಖಾಸಗಿ ಶಾಲೆಗಳಲ್ಲಿ ಆಡಳಿತ ಮಂಡಳಿಯ ಬಿಗಿ ನಿರ್ವಹಣೆಯಿಂದಾಗಿ ಕಲಿಕೆಯ ಮಟ್ಟ ಸ್ವಲ್ಪ ಹೆಚ್ಚಾಗಿದೆ. ಆದರೆ ಅಲ್ಲೂ ಒಟ್ಟಾರೆಯಾಗಿ ಗಮನಿಸಿದಾಗ ಕಲಿಕೆಯ ಮಟ್ಟ ಕಡಿಮೆಯೇ ಇರುವುದು ಏನನ್ನು ಸೂಚಿಸುತ್ತದೆ?

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು ಹತ್ತಾರು ಕಾರಣಗಳನ್ನು ಮುಂದಿಡುತ್ತಾರೆ. ಅದರಲ್ಲಿ ಮುಖ್ಯವಾದದ್ದು ಶಿಕ್ಷಕರ ಕೊರತೆ. ಒಬ್ಬನೇ ಶಿಕ್ಷಕ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಪಾಠ ಮಾಡಬೇಕಾದ ಸ್ಥಿತಿ ನೂರಾರು ಶಾಲೆಗಳಲ್ಲಿ ಇದೆ. ಕಳೆದ ವಾರ ಶಿಕ್ಷಣ ಸಚಿವರು, '2 ತಿಂಗಳಲ್ಲಿ 10 ಸಾವಿರ ಶಿಕ್ಷಕರನ್ನು ನೇಮಕಾತಿ ಮಾಡುತ್ತೇವೆ' ಎಂದು ಭರವಸೆ ಕೊಟ್ಟದ್ದು ಮಾಧ್ಯಮಗಳಲ್ಲಿ ಬಂತು. ಇಂತಹ ಭರವಸೆ ಕಳೆದ ಹತ್ತು ವರ್ಷಗಳಿಂದಲೂ ಕೇಳಿ ಬರುತ್ತಲೇ ಇದೆ. ಈಗಲೂ 10 ಸಾವಿರಕ್ಕಿಂತ ಹೆಚ್ಚು ಶಿಕ್ಷಕರ ಕೊರತೆ ರಾಜ್ಯದಲ್ಲಿ ಇದೆ ಎಂದರೆ ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ನೀಡಿರುವ ಪ್ರಾಮುಖ್ಯತೆ ಎಷ್ಟಿದೆ ಎನ್ನುವುದು ಗೊತ್ತಾಗುತ್ತದೆ. ಇನ್ನೊಂದು ಕಾರಣ ಶಿಕ್ಷಕರಿಗೆ ಸರ್ಕಾರ ನೀಡುತ್ತಿರುವ ಹೆಚ್ಚುವರಿ ಹೊಣೆ ಎನ್ನಲಾಗುತ್ತಿದೆ. ಅಡುಗೆ ಮಾಡುವುದರಿಂದ ಹಿಡಿದು ವಿವಿಧ ಜನಗಣತಿಗಳನ್ನು ಮಾಡುವವರೆಗೆ ಶಿಕ್ಷಕರ ಪಠ್ಯೇತರ ಚಟುವಟಿಕೆಗಳು ಹರಡಿಕೊಂಡಿವೆ. ಹೀಗಾಗಿ ಪಾಠ ಮಾಡುವುದಕ್ಕೆ ಸಾಕಷ್ಟು ಸಮಯ ಸಿಗುತ್ತಿಲ್ಲ ಎನ್ನುವುದು ಶಿಕ್ಷಕರ ಸಂಘಟನೆಗಳು ಹೇಳುತ್ತಿರುವ ವಾಸ್ತವಾಂಶ.

ಇದೊಂದು ಸ್ವಯಂಸೇವಾ ಸಂಸ್ಥೆಯ ವರದಿ ಎಂದು ಸರ್ಕಾರ ನಿರ್ಲಕ್ಷ್ಯ ವಹಿಸಬಾರದು. ರಾಜ್ಯದಲ್ಲಿ ಈಗಲೂ ಶೇಕಡಾ 1.1ರಷ್ಟು ಹೆಣ್ಣುಮಕ್ಕಳು ಶಾಲೆಗಳಲ್ಲಿ ನೋಂದಣಿಯಾಗಿಲ್ಲ. ಯಾದಗಿರಿಯಂತಹ ಜಿಲ್ಲೆಯಲ್ಲಿ ಈ ಪ್ರಮಾಣ ಶೇಕಡಾ 5.8ರಷ್ಟಿದೆ. ಅತ್ಯುತ್ತಮ ಕಲಿಕೆಯ ಮಟ್ಟ ಇರುವ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅದು ಏಕೆ ಸಾಧ್ಯವಾಗಿದೆ ಎನ್ನುವುದನ್ನು ಅರಿತುಕೊಂಡು ಎಲ್ಲ ಜಿಲ್ಲೆಗಳಲ್ಲೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರ ತುರ್ತುಕ್ರಮಗಳನ್ನು ಕೈಗೊಳ್ಳಬೇಕಿದೆ.

■ ಬಿ.ಎಂ.ಹನೀಫ್



ಈಶ್ವರ್